**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ ಸಿ ನಂಃ39/2022</u>**

ಸಾಕ್ಷಿಯ ಹೆಸರು: ಸೈಯದ್ ಮುಜಮ್ಮಿರ್ ಸಿ.ಡಬ್ಲ್ಯು: 3
ತಂದೆಯ ಹೆಸರು: ಮಕ್ಬುಲ್ ಅಹಮದ್ ಪಿ.ಡಬ್ಲ್ಯು: 3
ವಯಸ್ಸು : 32 ವರ್ಷ
ಉದ್ಯೋಗ : ಖಾಸಗಿ ಉದ್ಯೋಗಿ
ವಾಸ ಸ್ಥಳ : ಮೈಸೂರು

**ದಿನಾಂಕಃ 11-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ಅಪಘಾತ ಆದ ಮಾರನೇ ದಿವಸ ಪೊಲೀಸರು ನನ್ನನ್ನು ಮತ್ತು ಇನ್ನೊಬ್ಬ ವ್ಯಕ್ತಿ ಅಂದರೆ ಚಾಸಾ-4 ಮತ್ತು 6 ಇವರುಗಳನ್ನು ಪಂಚನಾಮೆಗೆ ಕರೆದುಕೊಂಡ ಹೋಗಿದ್ದರು. ಸ್ಥಳಕ್ಕೆ ಹೋದಾಗ ಮುಂಜಾನೆ 10 ರಿಂದ 11 ಗಂಟೆ ಆಗಿರಬಹುದು. ಚಾಸಾ-6 ತರೀಕೆರೆಯಲ್ಲಿ ಪಂಚರ ಅಂಗಡಿ ಹಾಕಿದ್ದಾರೆ. ಅವರೇ ಅಪಘಾತದ ಸ್ಥಳವನ್ನು ತೋರಿಸಿದ್ದಾರೆ. ಪೊಲೀಸರು ಅಪಘಾತದ ಸ್ಥಳವನ್ನು ಪರೀಶಿಲನೆ ಮಾಡಿ ಬರವಣಿಗೆ ಮಾಡಿದರು, ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸ್ಥಳ ಪಂಚನಾಮೆಯನ್ನು ನಿಪಿ.3 ಮತ್ತು ಸಾಕ್ಷಿ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ನಂತರ ನಮ್ಮನ್ನು ತರೀಕೆರೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ನಮ್ಮ ಬುಲೇಟ್ ಬೈಕ್ ಮತ್ತು ಅಪಘಾತಪಡಿಸಿದ ಲಾರಿ ಇತ್ತು. ಪೊಲೀಸರು ಅಲ್ಲಿ ಕೂಡಾ ಬರವಣಿಗೆ ಮಾಡಿ ನನ್ನ ಸಹಿ ಪಡೆದಕೊಂಡರು. ಸದರಿ ಪಂಚನಾಮೆಯನ್ನು ನಿಪಿ.4 ಮತ್ತು ಸಾಕ್ಷಿ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಿಪಿ.3 ಮತ್ತು 4 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಕೂಡಾ ನನಗೆ ಅದರ ಬಗ್ಗೆ ಓದಿ ತಿಳಿಸಿಲ್ಲ ಎಂದರೆ ಸರಿ. ಬರವಣಿಗೆ ಮಾಡಿದ್ದಾರೆ ಎನ್ನಲಾಗುವ ಸಮಯದಲ್ಲಿ ಫೋಟೊ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಲಾರಿಯ ಬಲಭಾಗ ಮತ್ತು ಸೈಲೆನ್ಸರ್ ಬಳಿ ಕೆಲವು ಡ್ಯಾಮೇಜ್ ಆಗಿದ್ದವು. ಲಾರಿ ನಂಬರ ಕೆಎ-14-1702 ಇರುತ್ತದೆ. ಈ ಪ್ರಕರಣದ ಚಾಸಾ-2 ನನ್ನ ಸ್ನೇಹಿತ ಎಂದರೆ ಸರಿ. ಚಾಸಾ-1 ಕೂಡಾ ನನಗೆ ತುಂಬಾ ಪರಿಚಯದ ವ್ಯಕ್ತಿ ಎಂದರೆ ಸರಿ . ಸಾಕ್ಷಿ ನಮ್ಮ ಪಕ್ಕದ ಮನೆಯಲ್ಲಿಯೇ ಇದ್ದಾರೆ ಎಂದು ಹೇಳುತ್ತಾರೆ. ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.